# ಸಿಡುಬಿಗೆ ಬೆನ್ನುಹಾಕಿ ಕಾಡದಾರಿಯಲ್ಲಿ ನಡಿಗೆ

‘ಓದು, ಕೇಳೋಣ’ ಎಂದು ಬಂಡೆಗಲ್ಲಿನ ಮೇಲೆ ಕುಳಿತು ಆಜ್ಞಾಪಿಸಿದ ಹರೀಂದ್ರ.

‘ಬೇಡ... ಇದು ಬೇರೆ ಯಾರೂ ಓದಬಾರದು, ಕೇಳಬಾರದು. ಅದು ನನಗಿಷ್ಟವಿಲ್ಲ’.

ಅದು ಹರೀಂದ್ರನಿಗೂ ಇಷ್ಟವಾಗಲಿಲ್ಲ. ಶಿಷ್ಯನಿಂದ ಇಂತಹ ಮಾತು ಬರಬಹುದೆಂದು ಹರೀಂದ್ರ ನಿರೀಕ್ಷಿಸಿರಲಿಲ್ಲ. ಸ್ವಲ್ಪ ಹೊತ್ತು ಆತನ ಮುಖದಲ್ಲಿ ಕಪ್ಪು ಬಣ್ಣ ಕಾಣಿಸಿತು. ಕೊನೆಗೆ ಅವನು ಹೇಳಿದ,

‘ಹೋಗಲಿ... ನೀನು ಬರೆದಿದ್ದು ಶೃಂಗಾರ ಪದಗಳಲ್ಲವೆ... ಅವಳು ಒಬ್ಬಳೇ ಓದಲಿ. ಆದರೆ ಒಂದು ವಿಷಯ... ಈ ಪತ್ರ ಅವಳು ತಗೊಂಡಮೇಲೆ ನನಗೆ ಪಾರ್ಟಿಬೇಕು’

‘ಏನು ಪಾರ್ಟಿ?’

‘ಪರಾಟ ಮತ್ತು ಮಟನ್ ಚಾಪ್ಸ್.’

‘ಬೀಫ್ ಸಾಲದೆ?’

‘ಸಾಲದು.’

ನನ್ನ ಪ್ರೇಮ ಲೇಖನದಲ್ಲಿ ದೊಡ್ಡ ಹಿತ್ತಿನ ವೇಲಾಯುಧನನ ಮಗಳು ವೀಣಾ ಬಿದ್ದೇಹೋದಳು! ನನ್ನ ಹಸ್ತಾಕ್ಷರವೂ ಚೆಂದವಾಗಿತ್ತು. ಏಳನೆಯ ತರಗತಿಯಿಂದ ನಿರಂತರವಾಗಿ ನನಗೆ ಎರಡನೆಯ ಬಹುಮಾನ ಬರುತ್ತಿತ್ತು. ನನ್ನ ಹಸ್ತಾಕ್ಷರಕ್ಕೆ ಎಂಟು, ಒಂಭತ್ತು, ಹತ್ತನೆಯ ಇಯತ್ತೆಗಳಲ್ಲಿ ಓದುವಾಗಲೂ ಫಸ್ಟ್ ಪ್ರೈಜ್. ನಾನು ಅದನ್ನು ಬೇರೆಯವರಿಗೆ ಬಿಟ್ಟು ಕೊಟ್ಟಿದ್ದಿಲ್ಲ.

ಹರೀಂದ್ರ ಒಂದು ಸೈಕಲನ್ನು ಬಾಡಿಗೆಗೆ ಪಡೆದು ತುಳಿಯುತ್ತಾ ದಣಿದು ಬಂದ. ಸೈಕಲ್ ಹತ್ತುವುದಕ್ಕೇ ನಾನು ಭಯಪಡುತ್ತಿದ್ದೆ. ಸೈಕಲನ್ನು

